ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 4/2021

(ಫ್ರಾಸಾ-1 ಚಾಸಾ-1)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 05.11.2024

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಧ |
| ತಂದೆಯ ಹೆಸರು | - | ತಿಮ್ಮರಾಯಪ್ಪ |
| ವಯಸ್ಸು | - | 30 ವರ್ಷ, |
| ಉದ್ಯೋಗ | - | ವ್ಯವಸಾಯ |
| ವಾಸ | - | ಗಂಗವಾರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-2 ನನ್ನ ಅಕ್ಕ. ನಾವು ಪರಿಶಿಷ್ಟ ಪಂಗಡ ಜಾತಿಗೆ ಸೇರಿದವರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಆರೋಪಿ ಒಕ್ಕಲಿಗ ಜನಾಂಗಕ್ಕೆ ಸೇರಿದವರು. ಚಾಸಾ-3 ನಮ್ಮ ಊರಿನವರು.

2. ದಿಃ29.09.2020 ರಂದು ಮಧ್ಯಾಹ್ನ 4 ಘಂಟೆಗೆ ಆರೋಪಿಯ ಹೊಲಕ್ಕೆ ನಾನು ಮತ್ತು ಚಾಸಾ-2 ಸೊಪ್ಪು ಕೀಳಲು ಹೋಗಿದ್ದು ನಾವು ಸೊಪ್ಪು ಕಿತ್ತಿರಲಿಲ್ಲ. ಆಗ ಆರೋಪಿಯು ಸೊಪ್ಪು ಕಿತ್ತಿದ್ದೇವೆ ಎಂದು ನಮ್ಮ ಜೊತೆ ಜಗಳ ಮಾಡಿದರು. ನನ್ನನ್ನು ಎಳೆದಾಡಿ ಕೋಲಿನಲ್ಲಿ ಹೊಡೆದರು. ಬಿಡಿಸಲು ಬಂದಾಗ ಆರೋಪಿ ಚಾಸಾ-2 ರವರಿಗೆ ಕೋಲಿನಲ್ಲಿ ಹಲ್ಲೆ ಮಾಡಿದರು. ನಾನು, ಚಾಸಾ-2 ಮತ್ತು ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರೂ ಸ್ಥಳದಲ್ಲಿ ಇರಲಿಲ್ಲ. ಆರೋಪಿ ನಮಗೆ, ನೀವು ಕೀಳು ಜಾತಿಯವರು, ಏಕೆ ಬರುತ್ತೀರಿ ಇಲ್ಲಿಗೆ ಎಂದು ಜಾತಿ ನಿಂದನೆ ಮಾಡಿದರು. ಆರೋಪಿ ಬೇರೆ ಏನನ್ನೂ ಮಾಡಿರುವುದಿಲ್ಲ.

3. ಗಲಾಟೆಯ ವಿಚಾರವನ್ನು ನಾವು ಚಾಸಾ-6 ರವರಿಗೆ ತಿಳಿಸಿದ್ದು ಅವರು ದೂರು ನೀಡಲು ಸೂಚಿಸಿದ್ದರಿಂದ ಗಲಾಟೆಯ ಮರುದಿನ ನಾನು ಠಾಣೆಯಲ್ಲಿ ದೂರು ನೀಡಿದೆನು. ಈಗ ನಾನು ದೂರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ದೂರನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

4. ನಾನು ದೂರು ನೀಡಿದ ಮರುದಿನ ಪೋಲಿಸರು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು ನಾನು ಗಲಾಟೆ ನಡೆದ ಸ್ಥಳ ತೋರಿಸಿದ್ದರ ಮೇರೆಗೆ ಪೋಲಿಸರು ಸ್ಥಳದಲ್ಲಿದ್ದ ನಾಲ್ಕು ಕೋಲುಗಳನ್ನು ಅಮಾನತುಪಡಿಸಿಕೊಂಡರು. ಈಗ ನಾನು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಸೀಲ್ ಮಾಡಿದ ವಸ್ತುಗಳನ್ನು ತೆರೆಯಲು ಅನುಮತಿ ಕೋರಿದ್ದು ಅವುಗಳು ಸೀಲ್ ಆಗಿದ್ದು ತೆರೆಯಲು ಅನುಮತಿ ನೀಡಲಾಯಿತು)

ಸಾಕ್ಷಿ ನ್ಯಾಯಾಲಯದಲ್ಲಿ ಎರಡು ದೊಣ್ಣೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ಮತ್ತು 2 ಎಂದು ಗುರ್ತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

5. ಚಾಸಾ-3 ಸಹ ಸ್ಥಳದಲ್ಲಿದ್ದು ಗಲಾಟೆ ಬಿಡಿಸಲು ಬಂದಾಗ ಆರೋಪಿ ಅವರಿಗೂ ಸಹ ಕೋಲಿನಿಂದ ಹಲ್ಲೆ ಮಾಡಿ ಅವರನ್ನು ಎಳೆದಾಡಿ ಅತ್ಯಾಚಾರ ಮಾಡಲು ಪ್ರಯತ್ನ ಮಾಡಿದರು ಎಂದು ಪೋಲಿಸರಿಗೆ ದೂರು ನೀಡಿದ್ದೇನೆ ಎಂದರೆ ಸರಿ. ಆರೋಪಿ ನಮಗೆ ಕೈಗಳಿಂದ ಸಹ ಹೊಡೆದು ಅವಾಚ್ಯವಾಗಿ ಬೈದಿರುತ್ತಾರೆ ಎಂದು ದೂರು ನೀಡಿರುತ್ತೇನೆ

ಎಂದರೆ ಸರಿ. ಚಾಸಾ-4 ಮತ್ತು 5 ಸಹ ಗಲಾಟೆ ಸಮಯದಲ್ಲಿ ಹಾಜರಿದ್ದರು ಎಂದರೆ ಸರಿ ಅವರು ನೀರಿಗಾಗಿ ಬಂದಿದ್ದರು.

6. ಗಲಾಟೆಯಲ್ಲಿ ಆರೋಪಿ ನಮಗೆ ಹೊಡೆದಿದ್ದರಿಂದ ನನಗೆ, ಚಾಸಾ-2 ಮತ್ತು 3 ರವರಿಗೆ ಗಾಯಗಳಾಗಿದ್ದು ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆವು ಎಂದರೆ ಸರಿ.

7. ಚಾಸಾ-6 ರವರು ನ್ಯಾಯ ಪಂಚಾಯ್ತಿ ಮಾಡುತ್ತೇನೆ ಎಂದು ಹೇಳಿ ಮಾಡದೇ ಇದ್ದಕ್ಕೆ ನಾನು ತಡವಾಗಿ ದಿಃ01.10.2020 ರಂದು ದೂರನ್ನು ನೀಡಿರುತ್ತೇನೆ ಎಂದರೆ ಸರಿ.

8. ನಿಪಿ-2 ಪಂಚನಾಮೆ ಸಮಯದಲ್ಲಿ ಚಾಸಾ-3, 7 ಮತ್ತು 8 ಸಹ ಹಾಜರಿದ್ದು ಪಂಚನಾಮೆಗೆ ಸಹಿ ಮಾಡಿದ್ದಾರೆ ಎಂದರೆ ಸರಿ. ಮು.ಮಾ-1 ಮತ್ತು 2 ನ್ನು ಚಾಸಾ-3 ರವರು ಸ್ಥಳದಿಂದ ಪೋಲಿಸರಿಗೆ ಎತ್ತಿ ಕೊಟ್ಟರು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ಈ ಪ್ರಕರಣದಲ್ಲಿ ಬೇರೆ ಪ್ರತ್ಯಕ್ಷ ಸಾಕ್ಷಿದಾರರು ಇದ್ದು ಅವರ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ರೂ.2000/- ಖರ್ಚಿನೊಂದಿಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು